**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಓ.ಎಸ್. ನಂ. 76/2019**

**ಸಿ.ಡಬ್ಲ್ಯೂ- 2**

| | |
|---|---|
| ಹೆಸರು | ಉಮಾ ಮಹೇಶ್ವರಿ |
| ಗಂಡನ ಹೆಸರು | ಟಿ ರಮೇಶ್ |
| ವಯಸ್ಸು | 51 |
| ಉದ್ಯೋಗ | ಪೋಸ್ಟ್‌ಮಾಸ್ಟರ್ ತಾಂತೋಣಿ ಮಲ್ಲೈ |
| ವಾಸ | ತಾಂತೋಣಿ ಮಲ್ಲೈ |

**ಸಾಕ್ಷಿಯನ್ನು ದಿನಾಂಕಃ 03.07.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಪ್ರತಿ ವಾದಿ ಪರ ವಕೀಲರಿಂದಃ**

ನಾನು ನ್ಯಾಯಾಲಯದ ಆದೇಶದಂತೆ ಈ ದಿನ ನ್ಯಾಯಾಲಯದ ಮುಂದೆ 2 ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. 1 ಮುತ್ತು ಸ್ವಾಮಿ ಎಂಬುವವರ ಅಕೌಂಟ್ ಓಪನಿಂಗ್ ಪರರಂ ಅನ್ನು ಹಾಜರುಪಡಿಸಿರುತ್ತೇನೆ. ಮತ್ತು ಸದರಿ ರಿರವರ ಖಾತೆಗೆ ಸಂಬಂದಿಸಿದಂತೆ ಖಾತೆಗೆ ಸಂಬಂಧಿಸಿದದಂತೆ ಲೆಡ್ಜರ್ ಪಾರಂ ಅನ್ನು ಹಾಜರುಪಡಿಸಿರತ್ತೇನೆ. ಸಾಕ್ಷಿಯ ಅಕೌಂಟ್ ಓಪನಿಂಗ್ ಪರರಂ ಅನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಸಿ 15 ಎಂದು, ಸಾಕ್ಷಿಯು ಮುತ್ತು ಸ್ವಾಮಿರವರ ಖಾತೆಗೆ ಸಂಬಂದಿಸದ ಅಕೌಂಟ್ ಓಪನಿಂಗ್ ಪಾರಂ ಅನ್ನು ಹಾಜರುಪಡಿಸಿದ್ದು ಅದನ್ನು ನಿಸಿ 16 ಎಂದು, ಅದರಲ್ಲಿದ್ದ ಸಾಕ್ಷಿಯ ಸಹಿಯನ್ನು ನಿಸಿ 16 (ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮಂದುವರೆದು ಹಿಂದೆ ಖಾತೆಯನ್ನು ತೆರೆಯುವ ಸಮಯದಲ್ಲಿ

140615 ಎಂದು  ಖಾತೆ ನಂ ಅನ್ನು ನೀಡಲಾಗಿದ್ದು ಈಗ ಗಣಕೀಕರಣಗೊಂಡ ಮೇಲೆ ಅವರ ಖಾತೆ ನಂಬರ್ 2140238022  ಎಂದು ಇರುತ್ತದೆ. ನಿ ಸಿ 15 ರಲ್ಲಿ ಮುತ್ತು ಸ್ವಾಮಿ ರವರು ಅವರ ನಾಮಿನಿಯಾಗಿ  ಅವರ ಹೆಂಡತಿಯಾದ ಧನಲಕ್ಷಿ ರವರ ಹೆಸರನ್ನು ತೋರಿಸಲಾಗಿತ್ತು. ನಿ  ಸಿ  15  ರಲ್ಲಿ ಸದರಿ ಮುತ್ತು ಸ್ವಾಮಿರವರು ಅವರ ಹೆಸರಿನ ಇನಿಸಿಯಲ್ ಗಳನ್ನು ತಿಳಿಸಿರುವುದಿಲ್ಲ.  ಹಾಗೇಯೇ ಅವರಿಗೆ  ಬೇರೆ ಹೆಸರು ಇರುವ ಬಗ್ಗೆಯು ಸಹ ತಿಳಿಸಿರುವುದಿಲ್ಲ. ಸದರಿ ಮುತ್ತು ಸ್ವಾಮಿ ರವರು ನಮ್ಮ ಕಛೇರಿಯಲ್ಲಿ ಖಾತೆಯನ್ನು  ತೆಗೆಸಿರುತ್ತಾರೆಯೇ ವಿನಃ ಯಾವುದೇ ವಹಿವಾಟು ನಡೆಸಿರುವುದಿಲ್ಲ.   ಸದರಿ ಮುತ್ತು ಸ್ವಾಮಿ ರವರ ಖಾತೆಯಲ್ಲಿ ಡಾರ್ ಮಂಟ್( In active) ಅಕೌಂಟ್ ಎಂದು  ಪರಿಗಣಿಸಲಾಗಿರುತ್ತದೆ. ಸದರಿ ಮುತ್ತು ಸ್ವಾಮಿ ರವರು ನಿ  ಸಿ 15 ರಲ್ಲಿ ತಮ್ಮ ಸಹಿಯನ್ನು  ತಮಿಳು ಭಾಷೆಯಲ್ಲಿ ಮಾಡಲಾಗಿರುತ್ತದೆ. 2015 ರ ಪೂರ್ವದಲ್ಲಿ ನಮ್ಮ ಇಲಾಖೆಯಲ್ಲಿ ಖಾತೆಯನ್ನು ತೆರೆಯಲು ಬಯಸುವವರು ಯಾವುದೇ ಗುರುತಿನ ಚೀಟಿಯನ್ನು ನೀಡದೇ  ತೆರೆಸುವ ಅವಕಾಶ ಇತ್ತು.

**ಪಾಟೀ ಸವಾಲುಃ  ವಾದಿ ಪರ ವಕೀಲರಾದ ಶ್ರೀ ಬಿ ಸಿ ಎಂ ರವರಿಂದಃ–**

ನಮ್ಮ ಇಲಾಖೆಯಲ್ಲಿ ಖಾತೆಯನ್ನು ತೆಗೆಯಲು ನಮ್ಮ ಇಲಾಖೆಯ ನೀತಿ ನಿಯಮಗಳ ಅಡಿಯಲ್ಲಿಯೇ ತೆರೆಯಬೇಕಾಗುತ್ತದೆ ಎಂದರೆ ಸರಿ. ಖಾತೆಯನ್ನು ತೆರೆಯುವ ಸಮಯದಲ್ಲಿ ಆಯಾ ವ್ಯಕ್ತಿಯ ಗುರುತಿನ ಚೀಟಿ ಮತ್ತು ವಾಸದ ಬಗ್ಗೆ ಗುರುತಿನ ಚೀಟಿಯನ್ನು ತೆಗೆದುಕೊಳ್ಳಲಾಗುತ್ತದೆ. ಅದೇ ರೀತಿ ಮುತ್ತು ಸ್ವಾಮಿ ರವರು ತಮ್ಮ ಖಾತೆಯನ್ನು ತೆರೆಯುವ ಸಮಯದಲ್ಲಿ ಅವರ ಗುರುತಿನ ಚೀಟಿಯೊಂದಿಗೆ ಅವರೇ ಸ್ವತಃ ಹಾಜರಿದ್ದು ಖಾತೆಯನ್ನು ತೆರೆಯಲಾಗಿರುತ್ತದೆ ಎಂದರೆ ಸರಿ. ಖಾತೆಯನ್ನು ತೆರೆಯ ಬಯಸುವವರು ತಮ್ಮ ಅರ್ಜಿಯೊಂದಿಗೆ ಅವರ ಅಡ್ಡ ಹೆಸರು ನಮುದಿಸುವುದು ಖಡ್ಡಾಯವಲ್ಲ ಎಂದರೆ ಸರಿ. ಸಾಮಾನ್ಯವಾಗಿ  ತುಂಬಾ ಜನರು ಖಾತೆಯನ್ನು ತೆರೆಸಿ ವಹಿವಾಟನ್ನು ನಡೆಸದೆ ಇರುವ ಖಾತೆಗಳು ಇರುತ್ತವೆ ಎಂದರೆ ಸರಿ.

ಯಾವುದೇ ವ್ಯಕ್ತಿ ಒಂದು ಬಾರಿ ನಮ್ಮ ಇಲಾಖೆಯಲ್ಲಿ ಖಾತೆಯನ್ನು ತೆರೆಸಿದರೆ ಅವರ ಖಾತೆಯನ್ನು  ನಾವಾಗಿಯೇ ಕ್ಲೋಸ್ ಮಾಡುವುದಿಲ್ಲ. ಯಾವುದೇ ವ್ಯಕ್ತಿ ಅವನ ಖಾತೆಯನ್ನು ಮುಂದವರಿಸುವ ಇಚ್ಚೆ ಇಲ್ಲದೆ ನಮಗೆ ತಿಳಿಸಿದರೆ ಅಂತವರವರ ಖಾತೆಗಳನ್ನು ಕೊನೆಗೊಳಿಸಲಾಗುತ್ತದೆ. ನಿಶಾನೆ ಸಿ 15 ರಂತೆ ಖಾತೆಯನ್ನು ಮುತ್ತು ಸ್ವಾಮಿ ಬಿನ್ ನೈನಾ ಗೌಂಡರ್ ರವರು ತೆರೆದಿರುತ್ತಾರೆ ಎಂದರೆ ಸರಿ.  ಸದರಿ ಖಾತೆಯನ್ನು ದಿನಾಂಕ 19.02.2015 ರಂದು ತೆರೆಯಲಾಗಿರುತ್ತದೆ ಎಂದರೆ ಸರಿ. ಸದರಿ ಮುತ್ತು ಸ್ವಾಮಿ ರವರು ತಮ್ಮ ಸಹಿಯನ್ನು  ತಮಿಳು  ಭಾಷೆಯಲ್ಲಿ ಮುತ್ತು ಸ್ವಾಮಿ ಎಂದು ಸಹಿ ಮಾಡಿರುತ್ತಾರೆ ಎಂದರೆ ಸರಿ. ನಿಶಾನೆ ಸಿ 16 ದಾಖಲಾತಿಯಲ್ಲಿ ದಿನಾಂಕ 31.03.2015 ರಿಂದ 31.03.2025 ರ ವರೆಗೆ ನೀಡಲಾಗಿರುತ್ತದೆ ಎಂದರೆ ಸರಿ. 2015 ರ ಹಿಂದೆ ಯಾರಾದರೂ ನಮ್ಮ ಇಲಾಖೆಯಲ್ಲಿ ಖಾತೆಯನ್ನು ತೆರೆಸಲು ಗುರುತಿನ ಚೀಟಿಯನ್ನು ಕೊಡುವುದು ಖಡ್ಡಾಯ ಇರಲಿಲ್ಲ. ಸಾಕ್ಷಿಯು ಮಂದುವರೆದು ಖಾತೆಯನ್ನು ತೆರೆಸುವ ಸಮಯದಲ್ಲಿ  ಯಾರಾದರೂ ನಮ್ಮ ಇಲಾಖೆಯಲ್ಲಿ ಖಾತೆಯನ್ನು ಹೊಂದಿದ ವ್ಯಕ್ತಿಯು ತೆರೆಸುವ ಇಚ್ಚೆಯುಳ್ಳ ವ್ಯಕ್ತಿಯನ್ನು ಗುರುತಿಸಬೇಕಾಗಿತ್ತು.

ಸಾಕ್ಷಿಗೆ 2015 ರ ಹಿಂದೆ ಅನ್ಯದೇಶದ ವ್ಯಕ್ತಿಗಳನ್ನು ನಿಮ್ಮ ಇಲಾಖೆಯಲ್ಲಿ ಖಾತೆ ತೆರೆಸಲು ಪರಿಚಯಿಸಿದರೆ ಅಂತವರ ಹೆಸರಿನಲ್ಲಿ ಖಾತೆಯನ್ನು ನೀಡಲಾಗುತ್ತದೆಯೇ ಎಂದರೆ ಸಾಕ್ಷಿಯು ಅಂತಹ ಅನ್ಯದೇಶದವರ ಖಾತೆಯನ್ನು ತೆರೆಸುವ ಮೊದಲು ನಮ್ಮ ಪೋಸ್ಟ್ ಮ್ಯಾನ್ ಬಳಿ ಹೇಳಿ ಅವರ ವಿಳಾಸವನ್ನು ತಿಳಿದುಕೊಂಡು ಖಾತೆಯನ್ನು ತೆರಸಲಾಗುತ್ತದೆ. ಸಾಕ್ಷಿಯು ಮುಂದುವರೆದು ಅನ್ಯದೇಶದವರ ವಿಳಾಸವು ಆಯಾ ಕಛೇರಿಯ ಸಾರಾ  ಹದ್ದಿನಲ್ಲಿ ಇಲ್ಲದೆ ಇದ್ದರೆ ಅಂತವರಿಗೆ ಖಾತೆಯನ್ನು ತೆರೆಸಲಾಗುವುದಿಲ್ಲ ಎಂದು ನುಡಿಯುತ್ತಾರೆ. 2015 ರ ಪೂರ್ವದಲ್ಲಿ ವ್ಯಕ್ತಿಯು ಬೇರೆ ರಾಜ್ಯದ ವಿಳಾಸದ ಕೊರತೆ ಇದ್ದಲ್ಲಿ ಅಂತವರ ಖಾತೆಯನ್ನು ತೆರೆಯಲಾಗುತ್ತಿರಲಿಲ್ಲ. 2015 ರ ಪೂರ್ವದಲ್ಲಿ ನಮ್ಮ  ಇಲಾಖೆಯಲ್ಲಿ ಖತೆ

ತೆರೆಸುವ ಸಮಯ ಅವರುಗಳ ವಿಳಾಸ  ನಮ್ಮ ಪೋಸ್ಟ್  ಆಫೀಸಿನ ವ್ಯಾಪ್ತಿಯಲ್ಲಿ ಬಂದರೆ ಅಂತವರ ವಿಳಾಸವನ್ನು ನಮ್ಮ ಸಿಬ್ಬಂದಿಗಳ ಮೇಲೆ ಪರಿಶಿಲೀಸಿ ಖಾತೆಯನ್ನು ತೆರೆಸಲಾಗುತ್ತಿತ್ತು.

**ಮರು ವಿಚಾರಣೆ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,

ಹೆಚ್.ಡಿ.ಕೋಟೆ

ಓ.ಎಸ್ ನಂ.25/2019 ಡಿ.ಡಬ್ಲ್ಯೂ-1

**ಸಾಕ್ಷಿಯನ್ನು ದಿನಾಂಕಃ 02.07.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಕೆ.ಪಿ.ಪಿ. ವಕೀಲರಿಂದಃ**

ಇರುವಿದಿ ಗ್ರಾಮದ ಸರ್ವೆ ನಂ. 11/3 ರ ವಿಸ್ತೀರ್ಣ 28 ಗುಂಟೆ ಆಸ್ತಿಯು ಪಿತ್ರಾರ್ಜಿತ ಆಸ್ತಿಯಲ್ಲ ಹಾಗೂ ಒಟ್ಟು ಕುಟುಂಬದ ಆಸ್ತಿಯಲ್ಲ ಎಂದು ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ಮೃತ ಪ್ರತಿವಾದಿ 5 ರವರ ವಾರಸುದಾರರಿಗೆ ಪ್ರತಿವಾದಿ 6 ಮತ್ತು 7 ರವರ ಪರವಾಗಿ ಸಾಕ್ಷಿ ನುಡಿಯುತ್ತಿಲ್ಲ. ನಾನು ಪ್ರತಿವಾದಿ 5 ರಿಂದ 7 ರವರ ಪರವಾಗಿ ಸಾಕ್ಷಿಯನ್ನು ನುಡಿಯದೇ ಇರುವುದರಿಂದ ನನ್ನ ಸಾಕ್ಷಿ ಪ್ರಮಾಣ ಪತ್ರದ ಕಂಡಿಕೆ 5 ರಲ್ಲಿ ಪ್ರತಿವಾದಿ 5 ರಿಂದ 7 ರವರಿಗೆ ವಾದಿ ಯಾರೂ ಎಂದು ತಿಳಿದಿರುವುದಿಲ್ಲ ಎಂದು ತಿಳಿಸಿದ್ದು ಆ ರೀತಿ ನನಗೆ ಹೇಳಲು ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸಾಕ್ಷಿಯು ನಾನು ಹೇಳುವಂತೆ ಪ್ರತಿವಾದಿ 5 ರಿಂದ 7 ರವರಿಗೂ ವಾದಿ ಯಾರು ಎಂದು ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ.

ನನ್ನ ತಾತನ ಹೆಸರು ಎ.ಎಸ್. ಪುಟ್ಟಸ್ವಾಮಿ ಹಾಗೂ ನನ್ನ ತಾತನ ತಂದೆಯ ಹೆಸರು ಸಿದ್ದೇಗೌಡ ಆಗಿರುತ್ತದೆ. ದಾವಾ ಆಸ್ತಿಗಳು ನನ್ನ ತಾತನವರಾದ ಎ.ಎಸ್. ಪುಟ್ಟಸ್ವಾಮಿ ಅವರಿಗೆ ಪಿತ್ರಾರ್ಜಿತವಾಗಿ ಬಂದಿರುತ್ತದೆ. ನನ್ನ ತಾತನ ತಂದೆಯಾದ ಸಿದ್ದೇಗೌಡ ಅವರಿಗೆ **1.** ಎ.ಎಸ್. ಸಿದ್ದರಾಮಪ್ಪ **2.** ಎ.ಎಸ್. ದಾಸಪ್ಪ **3.** ಎ.ಎಸ್. ಪುಟ್ಟಸ್ವಾಮಿ ಎಂಬ 03 ಜನ ಮಕ್ಕಳು ಇದ್ದರು ಎಂದರೆ ಸಾಕ್ಷಿಯು ಸರಿಯಲ್ಲ ಎಂದು ನುಡಿಯುತ್ತಾರೆ.

ಅಸಲು ದಾವಾ ಸಂಃ 131/1989 ರಲ್ಲಿ ನನ್ನ ಅತ್ತೆಯಂದಿರು ಮತ್ತು ನನ್ನ ಅಜ್ಜಿ ರವರು ನನ್ನ ತಂದೆಯ ವಿರುದ್ಧ ದಾವೆಯನ್ನು ಹೂಡಿರುತ್ತಾರೆ. ಆ ದಾವೆಯಲ್ಲಿ ಪ್ರಸ್ತುತ

ದಾವೆಯ ವಾದಿ ಕಮಲಮ್ಮ ಅವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಅವರು ಯಾರು ಎಂದು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಪ್ರಸ್ತುತ ದಾವೆಯ ವಾದಿ ಕಮಲಮ್ಮ ಅವರ ಬಗ್ಗೆ ನಮ್ಮ ಅಜ್ಜಿ ಅತ್ತೆಯಂದಿರಿಗೆ ತಿಳಿದಿದ್ದರೂ ಸಹ ಅವರು ಯಾರೂ ಎಂದು ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರವು ಸುಳ್ಳು ಮಾಹಿತಿಯಿಂದ

ಕೂಡಿದ್ದು ವಾದಿರವರಿಗೆ ಭಾಗ ಕೊಡಬೇಕಾಗುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ವಾದಿ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು. (ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ

**ಓ.ಎಸ್ ನಂ. 71/2010** **ಪಿ..ಡಬ್ಲ್ಯೂ-1**

**ಸಾಕ್ಷಿಯನ್ನು ದಿನಾಂಕಃ 02.07.2025 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಜಿ.ಸಿ. ವಕೀಲರಿಂದಃ**

ಸಾಕ್ಷಿಗೆ ನಿಪಿ 01 ಮತ್ತು 02 ರಂತೆ ಕರಾರುಪತ್ರ ಆಗುವ ಸಮಯದಲ್ಲಿ ತೋರಿಸಿದಂತಹ ಸ್ವತ್ತಿನ ಷೆಡ್ಯೂಲ್ ಮತ್ತು ಈಗ ದಾವಾ ಸ್ವತ್ತನ್ನು ತಿದ್ದುಪಡಿ ಮಾಡಿ ಹೊಸದಾಗಿ ಷೆಡ್ಯೂಲ್ ಅನ್ನು ತೋರಿಸಲಾಗಿರುತ್ತದೆಂದರೆ ಸಾಕ್ಷಿದಾರರು ದಾವಾ ಸ್ವತ್ತನ್ನು ನೀಡುವ ಸಮಯದಲ್ಲಿ ಹೇಳಿದಂತಹ ಷೆಡ್ಯೂಲ್ ಅನ್ನೇ ಈಗ ತಿದ್ದುಪಡಿ

ಮಾಡಲಾಗಿರುತ್ತದೆ ಎನ್ನುವರು. ನಿಪಿ 1 ಮತ್ತು 2 ರಲ್ಲಿ ತಿದ್ದುಪಡಿ ಮಾಡಿ ಸೇರಿಸಿದಂತಹ ಸ್ವತ್ತುಗಳನ್ನು ತೋರಿಸಿರಲಿಲ್ಲ ಎಂದರೆ ಸಾಕ್ಷಿದಾರರು ಪುನಃ ನಾವು ಕರಾರುಪತ್ರ ಮಾಡಿಕೊಳ್ಳುವ ಸಮಯದಲ್ಲಿ ಬಾಯಿಮಾತಿನಲ್ಲಿ ಹೇಳಿದಂತಹ ಸ್ವತ್ತನ್ನೇ ಈಗ ತಿದ್ದುಪಡಿ ಮಾಡಿ ತೋರಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. ತಿದ್ದುಪಡಿ ಮಾಡಿದಂತಹ ಸ್ವತ್ತುಗಳನ್ನು ನಿಪಿ 1 ಮತ್ತು 2 ರಂತೆ ಕರಾರುಪತ್ರ ಆದ ದಿನದಿಂದ

ದಾವೆಯನ್ನು ಮಾಡುವ ದಿನಾಂಕದವರೆಗೆ ಸದರಿ ಸ್ವತ್ತುಗಳನ್ನು ನೋಂದಣಿ ಮಾಡಿಸಿಕೊಡುವಂತೆ ನೀವು ಪ್ರತಿವಾದಿಗಳ ಬಳಿ ಲಿಖಿತದ ಮೂಲಕ ಕೇಳಿರುತ್ತೀರಾ ಎಂದರೆ ಸಾಕ್ಷಿದಾರರು ನಾನು ಲಿಖಿತ ಮೂಲಕವೇ ಪ್ರತಿವಾದಿಗಳಲ್ಲಿ ತಿದ್ದುಪಡಿ ಮಾಡಿದ ಆಸ್ತಿಗಳಿಗೆ ಸಂಬಂಧಿಸಿದಂತೆ ಕ್ರಯಪತ್ರ ಮಾಡಿ ಕೊಡುವಂತೆ ಕೇಳಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಲಿಖಿತ ಮೂಲಕ ಪ್ರತಿವಾದಿಗಳಿಗೆ ನೀಡಿದ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ತಿದ್ದುಪಡಿ ಮಾಡಿದ ದಾವಾ ಸ್ವತ್ತಿನ ಬಗ್ಗೆ ಕ್ರಯಪತ್ರ ಮಾಡಿಕೊಡುವಂತೆ ಲಿಖಿತ ಮೂಲಕವಾಗಿ ಕೇಳಿರುವ ಪತ್ರಗಳನ್ನು 1994-95 ರಿಂದ ಇಲ್ಲಿಯವರಗೂ ಪ್ರತಿವಾದಿಗಳಿಗೆ ಯಾವುದೇ ಲಿಖಿತ ಮೂಲಕ ಕೇಳಿಕೊಂಡಿರುವುದೇ ಇಲ್ಲ ಎಂದರೆ ಸರಿಯಲ್ಲ.

ನಿಪಿ 1 ಮತ್ತು 2 ರಂತೆ ಕರಾರುಪತ್ರ ಆಗುವ ಸಮಯದಲ್ಲಿ ಡಿ.ಬಿ.ಸತೀಶ್ ಅವರು ಕಂಪನಿಯ ಪರವಾಗಿ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಸಹಿ ಮಾಡಿರುತ್ತಾರೆ ಅವರೇ ಈಗ ಅಸಲು ದಾವಾ ಸಂಃ 36/2011 ರಲ್ಲಿ 3 ನೇ ಪ್ರತಿವಾದಿ ಆಗಿರುತ್ತಾರೆ ಎಂದರೆ ಸರಿ. ಅಸಲು ದಾವಾ ಸಂಃ 36/2011 ರಂತೆ ದಾವೆ ಸಲ್ಲಿಸುವ ಸಮಯದಲ್ಲಿ ನಿಮ್ಮ ಮ್ಯಾನೇಜಿಂಗ್ ಡೈರೆಕ್ಟರ್ ಡಿ.ಬಿ.ಸತೀಶ್ ಅವರ ವಿರುದ್ಧ ಮತ್ತು ಇದೇ ಪ್ರತಿವಾದಿ ವಿರುದ್ಧ ದಾವೆ ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿಯು ಆ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ಡಿ.ಬಿ. ಸತೀಶ್ ಅವರು ನಮ್ಮ ಕಂಪನಿಯಿಂದ ರಿಸೈನ್ ಮಾಡಿದ್ದರು ಎಂದು ನುಡಿಯುತ್ತಾರೆ.

ಅಸಲು ದಾವಾ ಸಂಃ 36/2011 ರಲ್ಲಿ ತೋರಿಸಿರುವ ಪ್ರತಿವಾದಿ 1 ರಿಂದ 4 ರವರುಗಳೇ 1994–95 ನೇ ಸಾಲಿನಲ್ಲಿ ನಿಮ್ಮ ಕಂಪನಿಯ ಡೈರೆಕ್ಟರ್ ಗಳಾಗಿರುತ್ತಾರೆ ಎಂದರೆ ಸಾಕ್ಷಿಯು 1994–95 ನೇ ಸಾಲಿನಲ್ಲಿ ಪ್ರತಿವಾದಿ 1 ರಿಂದ 4 ರವರೇ ನಮ್ಮ ಕಂಪನಿಯ ಡೈರೆಕ್ಟರ್ ಗಳಾಗಿದ್ದರು ಎಂದು ನುಡಿಯುತ್ತಾರೆ.

ವಾದಪತ್ರದ ಕಂಡಿಕೆ 21 ಬಿ ರಲ್ಲಿ ಹೇಳಿರುವಂತೆ ಪ್ರತಿವಾದಿರವರು 31

ಎಕರೆಯ ಜಮೀನಿನ ವ್ಯತ್ಯಾಸದ ಬಗ್ಗೆ ಸರಿಪಡಿಸಿ ಕೊಡುವುದಾಗಿ ತಿಳಿಸಿರುವ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿದಾರರು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನೀವು ಹೇಳುವಂತೆ ಪ್ರತಿವಾದಿಯವರು ಯಾವತ್ತು 31 ಎಕರೆಯ ಜಮೀನಿನ ವ್ಯತ್ಯಾಸದ ಬಗ್ಗೆ ಸರಿಪಡಿಸಿ ಕೊಡುವುದಾಗಿ ತಿಳಿಸಿರಲಿಲ್ಲ ಎಂದರೆ ಸರಿಯಲ್ಲ.

ನನ್ನ ವಾದಪತ್ರದ ಕಂಡಿಕೆ 24 ರಲ್ಲಿ ಹೇಳಿರುವ 1 ರಿಂದ 3 ಪರಿಹಾರಗಳ ಬಗ್ಗೆ ಪ್ರತಿವಾದಿರವರಿಗೆ 1994 ರಿಂದ ಇಲ್ಲಿಯವರಗೂ ನೀವು ತಿಳಿಸಿರುವುದಿಲ್ಲ ಎಂದರೆ ಸಾಕ್ಷಿಯು ನಾನು ತಿಳಿಸಿರುತ್ತೇನೆ ಎಂದು ನುಡಿಯುತ್ತಾರೆ. ನೀವು ಹೇಳಿದ ಸದರಿ ವಿಷಯದ ಬಗ್ಗೆ ಪ್ರತಿವಾದಿಯವರಿಗೆ ತಿಳಿಸಿದ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ ಎಂದರೆ ಸಾಕ್ಷಿಯು ಹಿಂದೆ ಸಲ್ಲಿಸಿರಲಿಲ್ಲ ಈಗ ನ್ಯಾಯಾಲಯಕ್ಕೆ ಸಲ್ಲಿಸುತ್ತೇನೆ ಎಂದು ನುಡಿಯುತ್ತಾರೆ.

ವಾದಪತ್ರದಲ್ಲಿ ತಿದ್ದುಪಡಿ ಮಾಡಿ ಸೇರಿಸಿದಂತಹ ಬಿ ಷೆಡ್ಯೂಲ್ ಸ್ವತ್ತುಗಳು ಅಂದರೆ 1 ರಿಂದ 27 ಸ್ವತ್ತುಗಳು 1994 ಮತ್ತು 1995 ರಲ್ಲಿ ಆದ ಕರಾರು ಪತ್ರಗಳಲ್ಲಿ ತೋರಿಸಿಲ್ಲದೇ ಇರುವುದರಿಂದ ಪ್ರತಿವಾದಿಯವರು ಬಿ ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಿಸಿದಂತೆ ಕ್ರಯಪತ್ರವನ್ನು ಮಾಡಿ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ನಾನು ವಾದಪತ್ರದಲ್ಲಿ ಕೇಳಿರುವಂತಹ ಯಾವುದೇ ಪರಿಹಾರಗಳಿಗೆ ಬಾಧ್ಯಸ್ಥನಾಗಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯವರಿಂದ ಅಕ್ರಮ ಲಾಭ ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,

ಹೆಚ್.ಡಿ.ಕೋಟೆ

**ಓ.ಎಸ್. ನಂ.** 17/2022 **ಡಿ.ಡಬ್ಲ್ಯೂ-** 1

**ಸಾಕ್ಷಿಯನ್ನು ದಿನಾಂಕಃ** 02.07.2025 **ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಪ್ರತಿ ವಾದಿ ಪರ ವಕೀಲರಿಂದಃ**

ನಾನು ಹಲವು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡಿ ಗುರುತಿಸುತ್ತಿದ್ದೇನೆ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಪಹಣಿ ಪತ್ರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ 37, ನಿಡಿ 38, ನಿಡಿ 39, ನಿಡಿ 40 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,

ಹೆಚ್.ಡಿ.ಕೋಟೆ

ಓ.ಎಸ್. ನಂ. 24 /2024 ಪಿ.ಡಬ್ಲ್ಯೂ- 1

**ಸಾಕ್ಷಿಯನ್ನು ದಿನಾಂಕಃ 02.07.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ನಾನು ಹಲವು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡಿ ಗುರುತಿಸುತ್ತಿದ್ದೇನೆ. ದಿನಾಂಕಃ 24.07.1961 ರಂದು ಆದ ನೋಂದಾಯಿತ ಕ್ರಯಪತ್ರದ ಅಸಲು ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 1 ಎಂದು, ದಿನಾಂಕಃ 18.07.1961 ರಂದು ಆದ ನೋಂದಾಯಿತ ಕ್ರಯಪತ್ರದ ಅಸಲು ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 2 ಎಂದು, ಆರ್. ಎ. 157/2019 ರ ಆದೇಶ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 3 ಎಂದು, ಸರ್ವಮಂಗಳ ಎಂಬುವವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 4 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ

**ಓ.ಎಸ್. ನಂ. 09 /2022** **ಪಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕಃ 02.07.2025 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ನಾನು ಹಲವು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡಿ ಗುರುತಿಸುತ್ತಿದ್ದೇನೆ. ನೋಟರಿಕೃತ ವಂಶವೃಕ್ಷವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 1 ಎಂದು, ನಟೇಶ್ ಎಂಬುವವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 2 ಎಂದು, ಬಸವರಾಜು ಹೆಚ್.ಎಂ. ಇವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 3 ಎಂದು, ದಿನಾಂಕಃ 16.07.2003 ರಂದು ಆದ ನೋಂದಾಯಿತ ಕ್ರಯಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ 4 ಎಂದು, ದಿನಾಂಕಃ 21.05.2014 ರಂದು ರಂದು ಆದ ನೋಂದಾಯಿತ ಕ್ರಯಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ 5 ಎಂದು, ಒಂದು ಡಿಮ್ಯಾಂಡ್ ರಿಜಿಸ್ಟರ್ ಅನ್ನು ಹಾಜರುಪಡಿಸಿದ್ದು ಅದನ್ನು ನಿಪಿ 6 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ

**ಓ.ಎಸ್. ನಂ. /20** **ಪಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ .2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ನಾನು ಹಲವು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡಿ ಗುರುತಿಸುತ್ತಿದ್ದೇನೆ.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಮತ್ತು ಆತನ ಪರ ವಕೀಲರು ಗೈರುಹಾಜರಾಗಿದ್ದು ನ್ಯಾಯದ ಹಿತದೃಷ್ಟಿಯಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

ಪಾಟೀಸವಾಲುಃ ಪ್ರತಿವಾದಿಗಳು ಗೈರು ಹಾಜರು ಇದ್ದು ಲಿಖಿತ ಹೇಳಿಕೆ ಸಲ್ಲಿಸಿಲ್ಲ, ಹಾಗಾಗಿ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ

**ಓ.ಎಸ್ ನಂ. /20** **ಡಿ.ಡಬ್ಲ್ಯೂ-**

**ಸಾಕ್ಷಿಯನ್ನು ದಿನಾಂಕ .2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ</u>**

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,

ಹೆಚ್.ಡಿ.ಕೋಟೆ

**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಓ.ಎಸ್. ನಂ. 76/2019**

**ಸಾಕ್ಷಿಗೆ ದಿನಾಂಕ .2025 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸುಪ್ರಿಯಾ ದೇವನೂರು | ಸಿ.ಡಬ್ಲ್ಯೂ–1 |
| ತಂದೆಯ/ಗಂಡನ ಹೆಸರು | : | ಭರತೇಶ ಕುಮಾರ್ | |
| ವಯಸ್ಸು | : | 35 | |
| ಉದ್ಯೋಗ | : | ಸೀನಿಯರ್ ಸೈಂಟಿಪಿಕ್ ಆಫೀಸರ್ | |
| ವಾಸಸ್ಥಳ | : | ಮೈಸೂರು | |

**ಮುಖ್ಯ ವಿಚಾರಣೆಃ**

ನಾನು 2022 ರಿಂದ ಮೈಸೂರಿನ ಆರ್.ಎಫ್.ಎಸ್.ಎಲ್ ನಲ್ಲಿ ಸೀನಿಯರ್ ಸೈಂಟಿಪಿಕ್ ಆಫೀಸರ್ ಆಗಿ ಕೆಲಸ ಮಾಡುತ್ತಿದ್ದೇನೆ. ಈ ದಾವೆಗೆ ಸಂಬಂಧಿಸಿದಂತೆ ಮುತ್ತುಸ್ವಾಮಿ ಎಂಬುವವರ ಒಪ್ಪಿತ ಸಹಿ ಎಸ್–1 ಮತ್ತು ಎಸ್–2 ಅನ್ನು ವಿವಾದಿತ ದಾಖಲೆಗಳಾದ ಸಿ–1 ರಿಂದ ಸಿ–4 ರಲ್ಲಿರುವ ಸಹಿಗಳನ್ನು ಸಿ–1 ಎ ರಿಂದ ಸಿ–4 ಎ ವರೆಗಿನ ಸಹಿಗಳನ್ನು ತಾಳೆ ಮಾಡಿ ವರದಿ ನೀಡುವಂತೆ ವಾರೆಂಟ್ ಬಂದಿದ್ದು, ಆ

ಪ್ರಕಾರ ನಾನು ಎಸ್‌-1 ಮತ್ತು ಎಸ್‌-2 ದಾಖಲೆಯಲ್ಲಿರುವ ಸಹಿಯನ್ನು ಎ-1 ರಿಂದ ಎ-4 ಎಂದು ಗುರುತಿಸಿ ಸದರಿ ಸಹಿಗಳನ್ನು ವಿವಾದಿತ ಸಿ-1 ಎ ರಿಂದ ಸಿ-4 ಎ ವರೆಗಿನ ಸಹಿಗಳನ್ನು ವೈಜ್ಞಾನಿಕವಾಗಿ ವಿಡಿಯೋ ಸ್ಪೆಕ್ಟಲ್ ಕಂಪ್ಯಾರೇಟಿವ್ ಎಂಬ ಉಪಕರಣದಿಂದ ಪರೀಕ್ಷಿಸಿದಾಗ ಈ ಕೆಳಕಂಡ ಅಭಿಪ್ರಾಯವನ್ನು ನೀಡಿರುತ್ತೇನೆ.
ಸಿ-1 ಎ ರಿಂದ ಸಿ-4 ಎ ಹಾಗೂ ಎ 1 ರಿಂದ ಎ 4 ಸಹಿಗಳು ಇಬ್ಬರು ಬೇರೆ ಬೇರೆ ವ್ಯಕ್ತಿಗಳ ಮಾಡಿರುವ ಸಹಿಗಳಾಗಿರುತ್ತವೆ. ಈ ಬಗ್ಗೆ ನನ್ನ ವರದಿಯನ್ನು ನೀಡಿದ್ದು, ಸಾಕ್ಷಿದಾರರು ಸದರಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಸಿ1 ಎಂದು, ಸಿಗ್ನೇಚರ್ ಎನಲಾರ್ಜ್ ಪ್ರಿಂಟನ್ನು ನಿಸಿ1 ಎ ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ ಏನೂ ಇಲ್ಲ

**ಪಾಟೀ ಸವಾಲುಃ ವಾದಿ ಪರ ಶ್ರೀ ಬಿ.ಸಿ.ಎಂ ವಕೀಲರಿಂದಃ**

ನಾನು 2014 ರಿಂದ 2022 ರವರೆಗೆ ಮಡಿವಾಳದ ವಿಧಿವಿಜ್ಞಾನ ಪ್ರಯೋಗಾಲಯದಲ್ಲಿ ಕೆಲಸ ಮಾಡಿರುತ್ತೇನೆ. ವೈಜ್ಞಾನಿಕ ಪರಿಶೀಲನೆಯ ಆಧಾರದ ಮೇಲೆ ನಾನು ನನ್ನ ಅಭಿಪ್ರಾಯವನ್ನು ನೀಡಿರುತ್ತೇನೆ. ನನ್ನ ವರದಿಯಲ್ಲಿ ಸಹಿಗಳನ್ನು ಬೇರೆ ಬೇರೆ ವ್ಯಕ್ತಿ ಮಾಡಿರುತ್ತಾರೆ ಎಂದು ಅಭಿಪ್ರಾಯ ನೀಡಬಹುದೇ ವಿನಃ ನನ್ನ ನಿರ್ಧಾರ ತಿಳಿಸಲು ಸಾಧ್ಯವಿಲ್ಲ ಎಂದರೆ ಸಾಕ್ಷಿದಾರರು ನನ್ನ ಅಭಿಪ್ರಾಯವನ್ನು ನೀಡಿರುತ್ತೇನೆ ಎನ್ನುವರು. ನಾನು ನೀಡಿರುವ ನಿಸಿ1 ವರದಿಯು ಒಬ್ಬ ತಜ್ಞರಿಂದ ಇನ್ನೊಬ್ಬ ತಜ್ಞರಿಗೆ ಬದಲಾವಣೆಯಾಗುವ ಸಾಧ್ಯತೆ ಇರುತ್ತದೆ ಎಂದರೆ ಸರಿಯಲ್ಲ. ತಜ್ಞರ ಅನುಭವದ ಆಧಾರದ ಮೇಲೆ ವರದಿಯು ಬದಲಾವಣೆಯಾಗುತ್ತದೆ ಎಂದರೆ ಸರಿಯಲ್ಲ. ಒಬ್ಬ ವ್ಯಕ್ತಿಯು ಹಲವಾರು ವರ್ಷಗಳ ನಂತರ ಸಹಿ ಮಾಡಿದಾಗ ಸಹಿಯಲ್ಲಿ ಬದಲಾವಣೆಯಾಗುತ್ತದೆ ಎಂದರೆ ಸಾಕ್ಷಿದಾರರು ಸಹಿ ಬದಲಾವಣೆಯಾಗುವುದಿಲ್ಲ, ಸ್ವಾಭಾವಿಕ ಬದಲಾವಣೆಯಾಗುತ್ತದೆ ಎನ್ನುವರು. ಒಬ್ಬ ವ್ಯಕ್ತಿಯು ಮಾನಸಿಕವಾಗಿ ಅಥವಾ ದೈಹಿಕವಾಗಿ ತೊಂದರೆಗೊಳಗಾದಾಗ ಆತನ ಸಹಿಯಲ್ಲಿ ಬದಲಾವಣೆಯಾಗುವ ಸಾಧ್ಯತೆ ಇರುತ್ತದೆ ಎಂದರೆ ಸಾಕ್ಷಿದಾರರು ನರಕ್ಕೆ ಸಂಬಂಧಿಸಿದಂತೆ ತೊಂದರೆಯಾದಲ್ಲಿ ಸಹಿಯಲ್ಲಿ ಬದಲಾವಣೆಯಾಗುವ ಸಾಧ್ಯತೆ ಇರುತ್ತದೆ ಎನ್ನುವರು. ಒಬ್ಬ ವ್ಯಕ್ತಿಯು ತನ್ನ ಚಿಕ್ಕ ವಯಸ್ಸಿನಲ್ಲಿ ಮಾಡಿರುವ ಸಹಿಗೂ

ಆತನು ವಯಸ್ಸಾದ ನಂತರ ಮಾಡುವ ಸಹಿಗೂ ವ್ಯತ್ಯಾಸವಿರುತ್ತದೆ ಎಂದರೆ ಸಾಕ್ಷಿದಾರರು ವಯಸ್ಸಿನ ಬದಲಾವಣೆಯಾದಂತೆ ಸಹಿಯಲ್ಲಿ ವ್ಯತ್ಯಾಸವಾಗುತ್ತದೆ ಎನ್ನುವರು. ಒಬ್ಬ ವ್ಯಕ್ತಿಯು ಚಿಕ್ಕದಾದ ಸ್ಥಳದಲ್ಲಿ ಸಹಿ ಮಾಡಿದಾಗ ಮತ್ತು ತುಂಬಾ ಜಾಗ ಇರುವ ಜಾಗದಲ್ಲಿ ದೊಡ್ಡದಾಗಿ ಸಹಿ ಮಾಡಿದಾಗ ಸಹಿಗಳಲ್ಲಿ ವ್ಯತ್ಯಾಸವಾಗುತ್ತದೆ ಎಂದರೆ ಸಾಕ್ಷಿದಾರರು ವ್ಯತ್ಯಾಸವಾಗುವುದಿಲ್ಲ, ಆದರೆ ಚಿಕ್ಕದಾದ ಸ್ಥಳದಲ್ಲಿ ಸಹಿ ಮಾಡುವಾಗ ಫ್ರೀ ಮತ್ತು ಫರ್ಮ್ ಮೂವ್‌ಮೆಂಟ್ ಕಡಿಮೆ ಇರುತ್ತದೆ ಎನ್ನುವರು. ಒಬ್ಬ ವ್ಯಕ್ತಿಯು ತನಗೆ ಪರಿಚಯವಿರದ ವ್ಯಕ್ತಿಯ ಅಥವಾ ತಾನು ನೋಡದಿರುವ ಸಹಿಯನ್ನು ನಕಲು ಮಾಡಲು ಸಾಧ್ಯವಿಲ್ಲ ಎಂದರೆ ಸಾಕ್ಷಿದಾರರು ಅದೇ ವ್ಯಕ್ತಿಯ ಸಹಿಯನ್ನು ನಕಲು ಮಾಡಲು ಸಾಧ್ಯವಿಲ್ಲ ಎನ್ನುವರು. ಒಬ್ಬ ವ್ಯಕ್ತಿಯು ಉಪಯೋಗಿಸುವ ಪೆನ್ನು ಸಹ ಸಹಿಯಲ್ಲಿ ಸ್ವಲ್ಪ ಬದಲಾವಣೆ ತರಬಹುದು ಎಂದರೆ ಸರಿ. ಒಬ್ಬ ವ್ಯಕ್ತಿಯು ಉಪಯೋಗಿಸುವ ಹಾಳೆಯ ಮೂಲಕವೂ ಸಹ ಸಹಿ ಸ್ವಲ್ಪ ಬದಲಾವಣೆಯಾಗಬಹುದು ಎಂದರೆ ಸಾಕ್ಷಿದಾರರು ಹಾಳೆಯು ದಪ್ಪವಾಗಿದ್ದಲ್ಲಿ ಪೆನ್ ಪ್ರೆಶರ್ ಬದಲಾವಣೆಯಾಗಬಹುದು ಎನ್ನುವರು. ಒಬ್ಬ ವ್ಯಕ್ತಿಯ ಬೆರಳಚ್ಚು ಬದಲಾವಣೆ ಆಗುವುದಿಲ್ಲ, ಆದರೆ ಸಹಿಯಲ್ಲಿ ಬದಲಾವಣೆಯಾಗಬಹುದು ಎಂದರೆ ಸಾಕ್ಷಿದಾರರು ಸ್ವಾಭಾವಿಕ ಬದಲಾವಣೆಯಾಗಬಹುದು ಎನ್ನುವರು. ನಾನು ಹೋಲಿಕೆ ಮಾಡಿರುವ ಸಹಿಗಳಲ್ಲಿ ಕೆಲವು ಅಂಶಗಳು ವ್ಯತ್ಯಾಸವಿರುತ್ತದೆ ಎಂದು ಹೇಳಿರುವುದು ನನ್ನ ಅಭಿಪ್ರಾಯ ಎಂದರೆ ಸಾಕ್ಷಿದಾರರು ಎಲ್ಲ ಕ್ಯಾರೆಕ್ಟರುಗಳನ್ನು ಪರಿಶೀಲನೆ ಮಾಡಿ ಅಭಿಪ್ರಾಯ ನೀಡಿರುತ್ತೇನೆ ಎನ್ನುವರು. ನಾನು ಮೇಲೆ ಹೇಳಿರುವ ಎಲ್ಲಾ ಸಾಧ್ಯತೆಗಳನ್ನು ಪರಿಶೀಲನೆ ಮಾಡದೇ ಬೇರೆ ಬೇರೆ ವ್ಯಕ್ತಿ ಸಹಿ ಮಾಡಿರುತ್ತಾರೆ ಎಂದು ನನ್ನ ನಿರ್ಧಾರ ನೀಡಿರುತ್ತೇನೆ ಎಂದರೆ ಸಾಕ್ಷಿದಾರರು ವೈಜ್ಞಾನಿಕವಾಗಿ ಪರಿಶೀಲನೆ ಮಾಡಿ ನನ್ನ ಅಭಿಪ್ರಾಯ ನೀಡಿರುತ್ತೇನೆ ಎನ್ನುವರು.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,

ಹೆಚ್.ಡಿ.ಕೋಟೆ

**O.S. No. 71/2010 PW-1**

**Administrated the oath to witness on 15.2.2023**

Cross examiantion: By Sri GC

I am working as director and promoter in the plaintiff company. It is true to suggest that I was not working as a director in the year 1994. The witness volunteers that he was working as financier. In the year 2021 I became director of plaintiff company. The witness volunteers that I was working as alternative director. It is true to suggest that the father Gomes was the priest in the defendant society. It is true to suggest that normally the priest cannot be director of the company. The witness volunteers we have made him as honorable chairman. It is false to suggest that no post of chairman can be created. The witness volunteers that according to memorandum and article of association, there is provision to create the post of chairman, accordingly we created the post.

I am not aware that whether the father Gomes had taken permission from the defendant society to become

a chairman in the plaintiff company. It is true to suggest that I am Roman catholic. It is true to suggest that I am aware that the Bishop is the head of the Diocese and all priests are under him. I am not the executent of ExP1 but I have signed it has witness. It is true to suggest that ExP1 is not registered. It is true to suggest that the present suit is filed by Violet Menezes, she is my wife. It is true to suggest that at present Violet Menezes is managing director and chief promoter. She is having serious impediment to appear before the court and adduce evidence as she is hard of earing. It is true to suggest that Violet Menezes had filed a suit no. 36/2011 before this court. It is true to suggest that in the said case she had adduced the evidence and fully cross examined by opposite party. It is false to suggest that the Violet Menezes is capable of appearing before the court to adduce evidence. It is false to suggest that she is not coming before court to avoid the truth before the court.

It is true to suggest that Father Benedict Gomes had signed the ExP1 on behalf of defendant society. The Benedict Gomes had signed in the capacity of seller and on behalf of her company managing director Sathish had signed it as purchaser. I am not aware that whether Benedict Gomes acting as chairman in the plaintiff company at the time of execution of ExP1. It is true to suggest that Benedict Gomes died on 3-4 months back. I am not aware that in the year 2010 the Benedict Gomes was still working as priest in the defendant society. It is true to suggest that the head quarters of defendant

society is mysuru. It is true to suggest that as of now I am residing in one of parishes at mysuru. It is false to suggest that when ExP1 was executed there was a bar for the company to purchase the agricultural lands. It is true to suggest that a bar was imposed by the government for purchase of agricultural land in the name of company. The witness volunteers that the land has been purchased in the nominee names of the company. It is true to suggest that all the lands mentioned in ExP1 are agricultural lands. It is false to suggest that the defendant society was not owner of the lands mentioned in the ExP1, the witness volunteers that the said lands were in the name of priest. It is true to suggest that ExP1 reflects that the lands agreed to sell stands in the name of independent person and societies. No time limit was fixed in the ExP1 to get the sale deed as more time was required for durasti and obtaining encumbrance certificate.

In ExP2 the time limit fixed for the execution of the sale deed was within one month from date of execution of the said document. It is true to suggest that after ExP2 no documents was executed extending the time for execution of sale deed. The witness volunteers that till the year 2007 the defendant society had executed the sale deed as lands were not durasthied. It is false to suggest that subsequent to the year 2005 no sale deeds were executed by the defendant or their assignees in favor of the plaintiff company. I have produce the documents to the court to show that even after the year 2004, sale deed have been executed in favor of the

plaintiff company by the defendant. It is true to suggest that the directors of the company had requested the defendant not to registered the lands in the name of any person as there is dispute among themselves. The witness volunteers that it was intentionally said to grab the lands.

The Girija and Faustin D’souza were only the nominees of the plaintiff company to get the sale deeds and A.Siddalingappa, D.B.Sathish, Alice Mascarenhas were the directors of the company. It is true to suggest that my wife as a manging director of the plaintiff company had filed suit no. 36/2011 before this court against the aforesaid persons. It is false to suggest that as there was dispute among the directors in our company, subsequent to 2005 no sale deeds were executed by defendant company at the request of the directors. The witness volunteers that as no sale deeds were executed, the dispute arose between the directors of the plaintiff company before the year 2000. It is true to suggest that the person namely D.B.Sathish mentioned in the ExP1 is the same person who is shown as defendant no.3 in suit no. 36/2011.

All the sale deeds executed prior to the year 2005 arr not done in the name of plaintiff company. It is true to suggest that the sale deeds have not been executed by the defendant society. The witness volunteers that the defendant society have several societies and on behalf of them the financial administrator had signed it. It is false to suggest that in the none of sale deeds the

defendant society is shown as seller. It is true to suggest that we have not obtaining permission from the government from the year 1994 to 2018 for the purchase of agricultural land. The witness volunteers that we have applied for it. It is true to suggest that the sale consideration amount mentioned in ExP1 & P2 is 3.05 crores. It is false to suggest that there was no coercion from the defendant company for the purchase of the suit land at the time of ExP2. The witness volunteers that the Bishop had written letter that if we did not agree to pay the additional money, the deal will be canceled and the land will be sold to some other person. That made us to sign the ExP2 which amount to coercion. When ExP1 & P2 came in to force I was not the part of the negotiation.

Further cross-examination is deferred at the request of the ld. counsel for defendant.

(The statement of the witness according to my instructions, it is typed in open court)

Read over and explained, it is found correct.

Senior Civil Judge & JMFC
H.D.Kote

(ಸಾಕ್ಷಿಯು ತಮಿಳಿನಲ್ಲಿ ನುಡಿದ ನುಡಿ ಸಾಕ್ಷಿಯನ್ನು ಭಾಷಾಂತರಕಾರರಾದ ವೇಲುಸ್ವಾಮಿ, ವಕೀಲರು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಿದ್ದು, ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು

ಮಾಡಲಾಯಿತು)